11

# “ಕ್ರಿಸ್ತನ ಸಭೆಗಳು”

*“ಪವಿತ್ರವಾದ ಮುದ್ದಿಟ್ಟು ಒಬ್ಬರನ್ನೊಬ್ಬರು ವಂದಿಸಿರಿ, ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ” (ರೋಮಾಪುರ 16:16).*

ನ್ಯಾಯಸ್ಥಾಪಕರು 11ನೆಯ ಅಧ್ಯಾಯದಲ್ಲಿ ಯೆಪ್ತಾಹನು ಅಮ್ಮೋನಿಯರಿಗೆ ವಿರುದ್ಧವಾಗಿ ನಿರ್ಣಾಯಕ ಯುದ್ಧದಲ್ಲಿ ತನ್ನ ಸೈನಿಕರೊಂದಿಗೆ ಹೋದನು, ಆದರೆ ಅವನ ಜಯವು ಕಹಿಯಾದ ಸಿಹಿಯಾಯಿತು, ಸಂತೋಷದಿಂದ ಉತ್ಸಾಹದೊಂದಿಗೂ ಮತ್ತು ದುಃಖದ ಕಣ್ಣೀರುಗಳೊಂದಿಗೂ ಮಿಶ್ರಬಣ್ಣವಾಯಿತು. ಯುದ್ಧಕ್ಕಿಂತ ಮೊದಲು ದೇವರ ಮುಂದೆ ಅವನು ಮಾಡಿಕೊಂಡ ಹರಕೆಯನ್ನು ಪೂರೈಸುವಲ್ಲಿ ತನ್ನ ಮಗಳನ್ನು ಅರ್ಪಿಸಬೇಕಾಗಿ ಬಂದದ್ದರಿಂದ ಈ ಆಚರಣೆಯನ್ನು ಅರ್ಧಕ್ಕೇ ಮುಗಿಸಬೇಕಾಯಿತು. ಅವನು ದುಃಖದಲ್ಲಿ ಮುಳುಗಿದ್ದಾಗ, ಎಫ್ರಾಯೀಮ್ಯರೊಂದಿಗೆ ವಾದ ಮಾಡಲು ಅವನು ಒತ್ತಾಯಿಸಲ್ಪಟ್ಟನು. ಇದು ಅವನ ಬಂಧುಗಳೊಡನೆ ದುಷ್ಟ ಒಡಕನ್ನುಂಟು ಮಾಡಿತು (ನ್ಯಾಯಸ್ಥಾಪಕರು 12:1-7) ಇದು ಹಳೇ ಒಡಂಬಡಿಕೆಯಲ್ಲಿ ಹೇಳಿದ ಇಸ್ರಾಯೇಲ್ಯರ ಯಾದವೀಕಲಹಗಳಲ್ಲಿ ಒಂದಾಗಿದೆ.

ಎಫ್ರಾಯೀಮ್ಯರು ಯೆಪ್ತಾಹನ ಯುದ್ಧ ನಿಪುಣರಾದ ಜನರಿಗೆ ಸರಿಸಮಾನರಾಗಿರಲಿಲ್ಲ. ಅವನ ಜನರು ಅವರನ್ನು ಸಮರ್ಥತೆಯಿಂದ ಸೋಲಿಸಿದರು ಮತ್ತು ಎಫ್ರಾಯೀಮ್ ಪ್ರದೇಶಕ್ಕೆ ಹೊಂದಿಕೊಂಡಿದ್ದ ಯೋರ್ದನ್ ಹೊಳೆಯ ಮೇಲಿನ ಹೊಳೆದಾಟುವ ಸ್ಥಳಗಳನ್ನು ವಶಪಡಿಸಿಕೊಂಡರು. ಯುದ್ಧರಂಗದಿಂದ ಹಿಂದಿರುಗಿ ತಪ್ಪಿಸಿಕೊಂಡು ಓಡಿಹೋಗುತ್ತಿದ್ದ ಎಫ್ರಾಯೀಮ್ಯರನ್ನು ಬಂಧಿಸಲು ದಾಟಿಹೋಗುವಲ್ಲಿ ತಾತ್ಕಾಲಿಕ ರಸ್ತೆ ತಡೆಗಳನ್ನು ಮಾಡಲಾಯಿತು.

ಎಫ್ರಾಯೀಮ್ಯರು ಆ ತಡೆಗಳ ಹತ್ತಿರ ನಿಂತುಕೊಳ್ಳುವಾಗ ತಾವು ಯಾರೆಂಬು ದನ್ನು ಗುರುತಿಸುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುವರೆಂದು ಯೆಪ್ತಾಹನು ತಿಳಿದಿದ್ದನು. ಯಾವುದೇ ನಿಜವಾದ ಎಫ್ರಾಯೀಮ್ಯನು ಯಶಸ್ವಿಯಾಗಿ ದಾಟಿ ಹೋಗ ದಿರುವುದಕ್ಕಾಗಿ ಅವನು ಒಂದು ಪರೀಕ್ಷೆಯನ್ನು ಹುಡುಕಿದನು. ಇಲ್ಲಿಗೆ ಬರುವ ಪ್ರತಿಯೊಬ್ಬನಿಗೆ “ಷಿಬ್ಬೊಲೇತ” ಎಂದು ಹೇಳಲು ಕೇಳಬೇಕೆಂದು ತನ್ನ ಜನರಿಗೆ ಅವನು ನಿರ್ದೇಶಿಸಿದನು. ತಮ್ಮ ಹಿನ್ನೆಲೆ ಮತ್ತು ಸಂಸ್ಕೃತಿಯ ಕಾರಣದಿಂದ ಎಫ್ರಾಯೀ ಮ್ಯರು “ಸ”ವನ್ನು “ಷ”ದ ಉಚ್ಚಾರದಲ್ಲಿ ಹೇಳುತ್ತಿದ್ದರು. ಯೋಚಿಸದೇ, ಅವರು “ಷಿಬ್ಬೊಲೇತ”ದ ಬದಲಾಗಿ “ಸಿಬ್ಬೊಲೇತ” ಎಂದು ಹೇಳುತ್ತಿದ್ದರು. ಹೊಳೆಯ ದಾಟುಗಳಲ್ಲಿ ನಿಂತುಕೊಂಡಾಗ ಎಫ್ರಾಯೀಮ್ಯರು ಸುಲಭವಾಗಿ ಯೆಪ್ತಾಹನ ಚಿಕ್ಕ ಯೋಜನೆಯಿಂದ ಗುರುತಿಸಲ್ಪಟ್ಟರು. ಮತ್ತು ನಾಲ್ವತ್ತೆರಡು ಸಾವಿರ ಜನ ಎಫ್ರಾಯೀಮ್ಯರು ನದಿಯ ತೀರದಲ್ಲಿ ಕೊಲ್ಲಲ್ಪಟ್ಟರು.

ಇಸ್ರಾಯೇಲಿನ ಚರಿತ್ರೆಯಲ್ಲಿ ಈ ಅಸಾಮಾನ್ಯವಾದ ಘಟನೆಯು ಒಂದು ಪದ - ಒಂದು ಚಿಕ್ಕ ಧ್ವನಿ - ಬಹು ದೂರದ ಅನ್ವಯಗಳುಳ್ಳದ್ದಾಗಿರುವುದು, ಜೀವನ - ಮತ್ತು

ಮರಣದ ಪರಿಣಾಮವನ್ನು ಹೊಂದಿರಬಹುದು ಎಂಬುದನ್ನು ಉದಹರಿಸುತ್ತದೆ. ಚಿಕ್ಕ ಪದಗಳಿಗೆ ಹಲವು ಸಲ ದೊಡ್ಡ ಅರ್ಥಗಳಿರುತ್ತವೆ.

"ಚಿಕ್ಕದರ ಮಹತ್ವದ" ಈ ಸತ್ಯವನ್ನು ನಮ್ಮ ಕರ್ತನಿಗೆ ಮತ್ತು ಹೊಸ ಒಡಂಬಡಿಕೆಯ ಸತ್ಯಕ್ಕೆ ಅನ್ವಯಿಸೋಣ. ಪರಿಶುದ್ಧಬರಹಗಳ ಪದಗಳು ಮತ್ತು ಮಾತುಗಳು ಪರಿಪೂರ್ಣ ಸತ್ಯವನ್ನು ಹೇಳುವುದರಿಂದ, ಪ್ರತಿಷ್ಠಿಸಿಕೊಂಡ ಪ್ರತಿಯೊಬ್ಬ ಶಿಷ್ಯನು ಪರಿಶುದ್ಧ ಬರಹಗಳು ಏನನ್ನು ಹೇಳುತ್ತವೆ ಮತ್ತು ಅವು ಅದನ್ನು ಹೇಗೆ ಹೇಳುತ್ತವೆ ಎಂಬುದನ್ನು ಜಾಗರೂಕತೆಯಿಂದ ಪರೀಕ್ಷಿಸತಕ್ಕದ್ದು.

ಪರಿಶುದ್ಧ ಬರಹಗಳಲ್ಲಿ ಒಂದು ಪದವು ಮೊದಲು ಬಹಳ ಚಿಕ್ಕದಾಗಿ ಕಾಣಿಸ ಬಹುದು; ಆದರೆ ಪ್ರಾಮಾಣಿಕತೆಯಿಂದ ಪರೀಕ್ಷಿಸಿ ನೋಡುವಾಗ, ಅದು ವಿಶೇಷವಾದ ಅರ್ಥಕೊಡುವುದನ್ನು ನಾವು ಕಂಡುಕೊಳ್ಳಬಹುದು. ಉದಾಹರಣೆಯಾಗಿ, ರೋಮಾಪುರ 16:16ರಲ್ಲಿ "ಕ್ರಿಸ್ತನ ಸಭೆಗಳು" ಎಂಬ ಮಾತು, ಸಂಧರ್ಭದ ದೃಶ್ಯದ ಭಾಗವಾಗಿ, ಪಠ್ಯದಲ್ಲಿ ವಿಶೇಷ ಕಾರ್ಯವಿರದಂತೆಯೂ ಕಂಡುಬರುತ್ತದೆ. ಹೀಗಿದ್ದರೂ, ಈ ಮಾತು ಪರಿಶೀಲಿಸಿದಾಗ, ಇದು ಮಹತ್ವದೊಂದಿಗೆ ತುಂಬಿಕೊಂಡಿರುವುದೆಂದು ಸ್ಪಷ್ಟವಾಗುತ್ತದೆ.

"ಸಭೆಯನ್ನು ನಾವು ಹೇಗೆ ಉಲ್ಲೇಖಿಸುತ್ತೇವೆ ಎಂಬುದು ಭಿನ್ನತೆಯನ್ನು ಮಾಡುವುದಿಲ್ಲ. ಹೆಸರುಗಳು ಮತ್ತು ರೂಢಿನಾಮಗಳು ಯಾವ ಅರ್ಥ ಕೊಡುವುದಿಲ್ಲ. ನೀನು ಯಾರು ಆಗಿದ್ದೀಯೋ ಅದು ಮುಖ್ಯವಾದದ್ದು, ಆದರೆ ನೀನು ಏನೆಂದು ಕರೆ ಯಲ್ಪಡುತ್ತಿಯೋ ಅದು ಮುಖ್ಯವಾದದ್ದಲ್ಲ" ಎಂದು ಒಬ್ಬನು ಹೇಳಬಹುದು. ಇದು ನಿಜವಾಗಿ ಸತ್ಯವಾದದ್ದೋ? ಯೆಪ್ತಾಹನು ನಿಶ್ಚಯವಾಗಿಯೂ ಈ ವಾದವನ್ನು ಮಾಡುತ್ತಿರಲಿಲ್ಲ. ಒಬ್ಬರು ಮಾತಾಡುವ ರೀತಿಯು ಅವನನ್ನು ಇಲ್ಲವೇ ಆಕೆಯನ್ನು ಗುರುತಿಸುವುದೆಂದು ಅವನು ತಿಳಿದಿದ್ದನು. ಹೆಸರಿನಿಂದ ಮತ್ತು ಜೀವನದಿಂದ ನಾವು ಗುರುತು ಹಿಡಿಯಲ್ಪಡಬೇಕೆಂದು ದೇವರು ಉದ್ದೇಶಿಸಿದ್ದನು. ಹೀಗೆ, ಒಬ್ಬ ಕ್ರೈಸ್ತನು ತನ್ನನ್ನು ಒಬ್ಬ "ನಾಸ್ತಿಕನು" ಇಲ್ಲವೇ ಒಬ್ಬ "ವಿಗ್ರಹಾರಾಧಕನು" ಎಂದು ಕರೆದುಕೊಳ್ಳುವುದಿಲ್ಲ ಇಲ್ಲವೇ ಬೇರೆ ಯಾವುದೇ ಸರಿಯಿಲ್ಲದ ಮಾರ್ಗದಲ್ಲಿ ತನ್ನನ್ನು ಹೇಳಿಕೊಳ್ಳುವುದಿಲ್ಲ. ನಮ್ಮ ಪ್ರತಿಯೊಂದು ಭಾಗವು - ನಮಗೆ ನಾವು ಅನ್ವಯಿಸಿಕೊಳ್ಳುವ ನಾಮಾಂಕಿತಗಳು - ನಾವು ಕ್ರಿಸ್ತನಿಗೆ ಒಳಪಟ್ಟಿದ್ದೇವೆ ಎಂದು ಘೋಷಿಸುವುದಾಗಿವೆ.

ಪರಿಶುದ್ಧಾತ್ಮನು ಸಭೆಗೆ "ಕ್ರಿಸ್ತನ ಸಭೆ" ಎಂದು ಉಲ್ಲೇಖಿಸಿದನು? ಯಾವ ಸಂಶಯವಾದರೂ ಇದೆಯೋ? ಸಭೆಯು ಇದೆಯೋ? ಸಭೆಯು ಕ್ರಿಸ್ತನ ಸಭೆಯಾಗಿದೆ. ಈ ವಿವರಣಾತ್ಮಕ ಮಾತು ಹೊಸ ಒಡಂಬಡಿಕೆಯ ಸಭೆಯ ಸ್ವಾಭಾವದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ ಅದನ್ನು ಜಾಗರೂಕತೆಯಿಂದ ಯೋಚಿಸೋಣ ಮತ್ತು ಅದರಲ್ಲಿ ಕಂಡುಬರುವ ಸತ್ಯಗಳನ್ನು ಸಂಶೋಧಿಸೋಣ.

## ಒಂದು ಆತ್ಮಿಕ ವಾಸ್ತವಿಕತೆ

ಮೊದಲನೆಯದಾಗಿ, ಸಭೆಯು ಸಜೀವ ವಾಸ್ತವಿಕತೆಯಾಗಿದೆ, ಒಂದು ಅಸ್ತಿತ್ವದಲ್ಲಿರುವ ಅಂಗವಾಗಿದೆ ಎಂಬುದನ್ನು ಉಲ್ಲೇಖವು ಸೂಚಿಸುತ್ತದೆ. ಸಭೆಯು ಇನ್ನು ಮುಂದೆ ಬರಬೇಕಾಗಿದ್ದುದರ ಒಂದು ವಾಗ್ದಾನವಾಗಿ ಉಳಿದಿರುವುದಿಲ್ಲ, ಆದರೆ ಇಂದಿನ ವಾಸ್ತವಿಕತೆಯಾಗಿದೆ, ಬಂದಂಥ ಸಂಗತಿಯಾಗಿರುತ್ತದೆ. ರೋಮಾಪುರ 16:16ರಲ್ಲಿ ಮಾತುಗಳು ಪೌಲನಿಂದ ಬರೆಯಲ್ಪಟ್ಟ ಸಮಯದಲ್ಲಿ, ಸಭೆಯು ರೋಮ್ ಸಾಮ್ರಾಜ್ಯದಲ್ಲೆಲ್ಲಾ ಪ್ರಸರಿಸಲ್ಪಡುತ್ತಿತ್ತು. ಪೌಲನು ಬರೆಯುತ್ತಿದ್ದ ಪ್ರದೇಶದಲ್ಲಿಯ ಸಭೆಗಳು ರೋಮ್‌ದಲ್ಲಿಯ ಕ್ರಿಸ್ತನ ಸಭೆಗಳಿಗೆ ತಮ್ಮ ವಂದನೆಗಳನ್ನು ಕಳುಹಿಸಿದವು.

ಮೋಶೆಯ ಯುಗದ ದೀರ್ಘವಾದ ವರ್ಷಗಳಲ್ಲೆಲ್ಲಾ, ಪ್ರವಾದಿಗಳು ಪ್ರವಾದಿಕ ಸಂಕೇತಗಳ ಮೂಲಕ "ಕೊನೆಯ ದಿನಗಳ" ಯುಗದ ಬರೋಣದ ಕಡೆಗೆ ತೋರಿಸಿದರು, ಅದರ ಪ್ರಾರಂಭದಲ್ಲಿ ಕರ್ತನ ರಾಜ್ಯವು ಸ್ಥಾಪಿಸಲ್ಪಡಲಿಕ್ಕಿರುವುದು (ದಾನಿಯೇಲ 2:44). ತನ್ನ ಸೇವೆಯ ಪ್ರಾರಂಭದಲ್ಲಿ, ಯೇಸುವು ಕಾಲವು ಪರಿಪೂರ್ಣವಾಗಿದೆ ಎಂದು ಪ್ರಸಂಗಿಸಿದನು: "ಯೋಹಾನನು ಸೆರೆಗೆ ಬಿದ್ದ ಮೇಲೆ ಯೇಸು ಗಲಿಲಾಯ ಸೀಮೆಗೆ ಬಂದು - ಕಾಲ ಪರಿಪೂರ್ಣವಾಯಿತು; ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ" (ಮಾರ್ಕ 1:14, 15). ಪರಲೋಕ ರಾಜ್ಯದ ಈ ಬರುವಿಕೆಯನ್ನು ಯೇಸುವು ತನ್ನ "ಸಭೆ" ಎಂದು ಕರೆದನು, ಮತ್ತು ತಾನು ಅದನ್ನು ಕಟ್ಟುವೆನೆಂದು ವಾಗ್ದಾನ ಮಾಡಿದನು (ಮತ್ತಾಯ 16:18).

ಯೇಸುವಿನ ದಿವಾರೋಹಣದ ದಿನ, ಅಪೊಸ್ತಲರು, ತಮಗೆ ಆತನು ಹೇಳಿದ್ದರ ಮೇಲೆ ಅವಲಂಭಿಸಿ (ಅಪೊಸ್ತಲರ ಕೃತ್ಯಗಳು 1:4, 5), ನೂತನ ಪ್ರಾರಂಭವು ಹತ್ತಿರವಾಗಿದೆಯೆಂದು ತಿಳಿದಿದ್ದರು. "ಸ್ವಾಮೀ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸಿಕೊಡುವಿಯೋ?" ಎಂದು ಅವರು ಕೇಳಿದರು (ಅಪೊಸ್ತಲರ ಕೃತ್ಯಗಳು 1:6). "ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳುಕೊಳ್ಳುವದು ನಿಮ್ಮ ಕೆಲಸವಲ್ಲ. ಆದರೆ ಪರಿಶುದ್ಧಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದುವಿರಿ ..." (ಅಪೊಸ್ತಲರ ಕೃತ್ಯಗಳು 1:7, 8) ಎಂದು ಯೇಸು ಅವರಿಗೆ ಪುನಃ ಭರವಸೆ ಕೊಟ್ಟನು. ಕ್ರಿಸ್ತನ ದಿವಾರೋಹಣವಾದ ಮೇಲೆ ಹತ್ತು ದಿನಗಳ ನಂತರ ಪಂಚಾಶತ್ತಮ ದಿನದಂದು ಕರ್ತನಿಂದ ಪರಿಶುದ್ಧಾತ್ಮನು ಸುರಿಸಲ್ಪಟ್ಟನು (ಅಪೊಸ್ತಲರ ಕೃತ್ಯಗಳು 2:1-4). ಆ ದಿನದಂದು ಪೇತ್ರನು ಪ್ರಸಂಗಿಸಿದ ನಂತರ, ಮೂರು ಸಾವಿರ ಜನರು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದರು ಮತ್ತು ಕರ್ತನಿಂದ ಆತನ ಸಭೆಗೆ ಸೇರಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:41, 47). ಸಭೆಯು, ಪ್ರೇರೇಪಿತ ಪ್ರವಾದನೆಯ ಮತ್ತು ಯೇಸುವಿನ ಮುಂತಿಳಿಸುವಿಕೆಯ ನೆರವೇರುವಿಕೆಯಾಗಿ, ಈಗ ಅಸ್ತಿತ್ವಕ್ಕೆ ಬಂದಿತು. ಅಪೊಸ್ತಲರ ಕೃತ್ಯಗಳು 2ರಿಂದ ಹೊಸ ಒಡಂಬಡಿಕೆಯಲ್ಲಿ ಮುಂದೆ, ಸಭೆಯು ಅಸ್ತಿತ್ವದಲ್ಲಿರುವಂತೆ ಮಾತಾಡಲ್ಪಟ್ಟಿದೆ. ಹೊಸ ಒಡಂಬಡಿಕೆಯಲ್ಲಿ ಪುನಃ ಎಂದೂ ಸಭೆಯು ಪ್ರವಾದಿಕವಾಗಿ ಬರಲಿಕ್ಕಿದ್ದ ಸಂಗತಿಯಂತೆ ಚಿತ್ರಿಸಲ್ಪಟ್ಟಿರುವುದಿಲ್ಲ.

ಪೌಲನು ರೋಮಾಪುರದವರಿಗೆ ಬರೆದ ತನ್ನ ಪತ್ರಿಕೆಯನ್ನು ಕ್ರಿ.ಶ. 56 ಇಲ್ಲವೇ 57ರಲ್ಲಿ ಕೊರಿಂಥದಲ್ಲಿ ಮುಕ್ತಾಯಗೊಳಿಸಿದನೆಂದು ಯೋಚಿಸಲಾಗಿದೆ. ಅಪೊಸ್ತಲರ ಕೃತ್ಯಗಳಲ್ಲಿಯ ಚರಿತ್ರೆಗನುಗುಣವಾಗಿ ಕ್ರಿಸ್ತನ ಸಭೆಗಳು ಅಖಾಯ, ಗ್ರೀಸ್, ಮತ್ತು ಮಕೆದೋನ್ಯಗಳಲ್ಲೆಲ್ಲಾ ಸ್ಥಾಪಿಸಲ್ಪಟ್ಟಿದ್ದವು. ರೋಮ್‌ದಲ್ಲಿ ಹಲವಾರು ಕ್ರಿಸ್ತನ ಸಭೆಗಳು ರೋಮ್‌ದಲ್ಲಿ ಸ್ಥಾಪಿಸಲ್ಪಟ್ಟಿದ್ದವೆಂದು ರೋಮಾಪುರದವರಿಗೆ ಬರೆದ ಪತ್ರಿಕೆಯು ತೋರಿಸುತ್ತದೆ. ಈ ಸತ್ಯಾಂಶಗಳ ದೃಷ್ಟಿಕೋನದಿಂದ, ಪೌಲನು ಈ ಪತ್ರಿಕೆಯನ್ನು, "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" (ರೋಮಾಪುರ 16:16) ಎಂಬ ವಂದನೆಯೊಂದಿಗೆ ಮುಗಿಸುವುದು ಯೋಗ್ಯವಾಗಿತ್ತು.

ಫಾರ್ಮಿನಲ್ಲಿ ನಾನು ಬಾಲಕನಾಗಿದ್ದಾಗ, ನನ್ನ ಸ್ವಂತದ್ದೆಂದು ಕರೆಯುವ ಸವಾರಿ ಮಾಡುವ ಕುದುರೆಯಿರಬೇಕೆಂದು ಕನಸು ಕಾಣುತ್ತಿದ್ದೆನು. ನನ್ನ ಸ್ನೇಹಿತರ ಹತ್ತಿರ ಕುದುರೆಗಳಿದ್ದವು, ಮತ್ತು ನನಗೂ ಒಂದು ಬೇಕಾಗಿತ್ತು. ನಾನು ಮತ್ತು ನನ್ನ ಸ್ನೇಹಿತರು ಒಂದಾಗಿ ಸವಾರಿ ಮಾಡುವುದು ಎಷ್ಟು ತಮಾಷೆಯಾಗಿರುವದೆಂದು ಯೋಚಿಸುವಾಗ, ನನಗೆ ಒಂದು ಕುದುರೆ ಬೇಕೆಂಬ ಅಪೇಕ್ಷೆಯು ಇನ್ನೂ ತೀವ್ರವಾಯಿತು. ಬೇಗನೇ ಈ

ಆಶೆಯು ನನ್ನ ಅತಿದೊಡ್ಡ ಹೆಬ್ಬಯಕೆಗಳಲ್ಲಿ ಒಂದು ಆಯಿತು. ಅದು ಎಷ್ಟು ಸರಿಯಾಗಿ ಇದ್ದಿರಲಿಲ್ಲವೆಂದು ಈಗ ನನಗೆ ಅರ್ಥವಾದರೂ, ಆಗ ನನಗೆ ಒಂದು ಕುದುರೆಯಿದ್ದರೆ ನನ್ನ ಜೀವಿತವು ಸಂಪೂರ್ಣವಾಗುವುದೆಂದು ನಾನು ನಿಜವಾಗಿಯೂ ನಂಬಿದ್ದೆನು.

ಹಣದ ಕೊರತೆಯಿತ್ತು, ಮತ್ತು ನಾನು ಹದಿಮೂರು ವರ್ಷದವನಾಗುವ ವರೆಗೆ ನನ್ನ ಆಶೆ ನೆರವೇರಲಿಲ್ಲ. ನಮ್ಮಲ್ಲಿ ಒಂದು ವಯಸ್ಸಾದ ಕುದುರೆಯಿತ್ತು. ಬೇರೆ ಬೇರೆ ಕೆಲಸಗಳಿಗಾಗಿ ಉಪಯೋಗಿಸುತ್ತಿದ್ದ ದಿನಗಳಿಂದ ನಿವೃತ್ತಿ ಹೊಂದಿ, ಅದು ಹುಲ್ಲುಗಾವಲನಿಗೆ ಬಿಡಲ್ಪಟ್ಟಿತ್ತು. ನಮ್ಮ ನೆರೆಯವನಲ್ಲಿ ಒಂದು ಎರಡು ವರ್ಷದ ಕುದುರೆಯಿತ್ತು. ನಮ್ಮ ವಯಸ್ಸಾದ ಕುದುರೆ ಮತ್ತು ಕೆಲವು ಡಾಲರು ಹಣಕೊಟ್ಟರೆ ನಮಗೆ ಆ ಕುದುರೆಯನ್ನು ಕೊಡುವುದಾಗಿ ಅವನು ಒಪ್ಪಿಕೊಂಡನು. ನಾವು ವ್ಯಾಪಾರ ಮಾಡಿದೆವು. ನನಗೆ ಬಹಳ ಆನಂದವಾಯಿತು. ಬಾಲಕನ ಕಲ್ಪನೆಯು ವಾಸ್ತವಾಂಶ ವಾಯಿತು.

ನನ್ನ ಜೀವನದ ಈ ಆನಂದದ ಸಮಯದ ಬಗ್ಗೆ ಆಸಕ್ತಿಯುಳ್ಳ ಸಂಗತಿಯು ನಾನು ನನ್ನ ಕುದುರೆಗೆ ಎಂದೂ ಹೆಸರನ್ನಿಡದೇ ಹೋದದ್ದು. ಅದು ವಿಚಿತ್ರವಾಗಿ ಕೇಳಿಸುತ್ತದೆಯಲ್ಲವೇ? ನಾವು ಅದನ್ನು ರೆಕ್ಸ್. ಇಲ್ಲವೇ ಟೋರ್ಚ್ ಅಥವಾ ಇತರ ಬೇರೆ ಹೆಸರಿನಿಂದ ಅದನ್ನೆಂದೂ ಕರೆಯಲಿಲ್ಲ; ನಾವು ಅದನ್ನು “ಎಡ್ಡಿಯ ಕುದುರೆ” ಎಂದು ಹೇಳುತ್ತಿದ್ದೆವು. ಕುದುರೆಯು ನನಗೆ ಬಹಳ ವಿಶೇಷವಾದದ್ದಾಗಿತ್ತು. ಕೆಲವು ಕಾರಣಗಳಿಂದ ನಾನು ಅದಕ್ಕೆ ಎಂದೂ ಹೆಸರು ಕೊಡಲಿಲ್ಲ, ನಾನು ನಮ್ಮ ಫಾರ್ಮಿನ ದಿನ್ನೆಗಳ ಮೇಲೆ ಮತ್ತು ಇತರ ಸ್ಥಳಗಳಲ್ಲಿ ಅದರ ಮೇಲೆ ಸವಾರಿ ಮಾಡಿದೆನು, ಆದರೆ ಎಂದೂ ಹೆಸರು ಕೊಡಲಿಲ್ಲ ಅದು ಯಾವಾಗಲೂ “ಎಡ್ಡಿಯ ಕುದುರೆ” ಆಗಿತ್ತು.

“ಎಡ್ಡಿಯ ಕುದುರೆ,” ಎಂಬ ಮಾತು ಸರಳವಾದದ್ದೂ ಆಕರ್ಷಣೆಯಿಲ್ಲದ್ದೂ ಆಗಿದ್ದರೂ, ಕೆಲವು ಸತ್ಯಗಳನ್ನು ಪ್ರಕಟಿಸಿತು. ಒಂದು ಸಂಗತಿ, ವ್ಯಕ್ತಪಡಿಸುವಿಕೆಯು ಕುದುರೆಯ ಒಡೆಯನು ಯಾರು ಎಂಬುದನ್ನು ಹೇಳಿತು.

ಇದೇ ರೀತಿಯಲ್ಲಿ ಹೊಸ ಒಡಂಬಡಿಕೆಯ ಸಭೆಗೆ ಪ್ರತ್ಯೇಕವಾದ ಹೆಸರು ಇರುವುದಿಲ್ಲ, ಅದು “ಕ್ರಿಸ್ತನ ಸಭೆಗಳು,” “ದೇವರ ಸಭೆಗಳು,” ಇಲ್ಲವೇ ಕೇವಲ “ಸಭೆ” ಎಂಬಂಥ ವಿವರಣಾತ್ಮಕ ಮಾತುಗಳಿಂದ ಗುರುತಿಸಲ್ಪಟ್ಟಿದೆ. ನಿಜವಾಗಿಯೂ, ಸಭೆಗೆ ಹೆಸರು ಕೊಡುವದಕ್ಕೆ ಹೊಸ ಒಡಂಬಡಿಕೆಯ ಅಧಿಕಾರವಿರುವುದಿಲ್ಲ. ಸಭೆಯು ಎಲ್ಲಿ ಕೂಡಿಬರುತ್ತದೆ ಎಂಬುದನ್ನು ನಾವು ಗುರುತಿಸಬಹುದು, ಸಭೆಯು ಯಾರ ಒಡೆತನದಲ್ಲಿ ಇರುವುದೆಂಬುದನ್ನು ವಿವರಿಸಬಹುದು, ಇಲ್ಲವೇ ಸಭೆಯು ಯಾರಿಂದ ರಚಿತವಾಗಿದೆ ಎಂಬುದನ್ನು ಹೇಳಬಹುದು - ಆದರೆ ಸಭೆಗೆ ಒಂದು ನಿರ್ದಿಷ್ಟ ವಾದ ಹೆಸರನ್ನು ಕೊಡುವುದಕ್ಕೆ ನಮಗೆ ಅಧಿಕಾರವಿರುವುದಿಲ್ಲ. ತನ್ನ ಸಭೆಗೆ ಹೆಸರನ್ನು ಇಡುವುದು ಯೋಗ್ಯವೆಂದು ಕಂಡುಕೊಳ್ಳಲಿಲ್ಲ; ಆತನು ಅದನ್ನು “ನನ್ನ ಸಭೆ” ಎಂದು ಕರೆದನು (ಮತ್ತಾಯ 16:18).

ಇನ್ನೊಂದು ಸಂಗತಿಗಾಗಿ “ಎಡ್ಡಿಯ ಕುದುರೆ” ಎಂಬ ನಾಮಾಂಕಿತವು ನನ್ನ ಆಶೆಯನ್ನು ಪಡೆದುಕೊಂಡೆನು, ನಾನು ನಿಜವಾಗಿಯೂ ಒಂದು ಕುದುರೆಯನ್ನು ಪಡೆದುಕೊಂಡೆನು ಎಂಬುದನ್ನು ತೋರಿಸಿತು. ಅದರಂತೆಯೇ “ಕ್ರಿಸ್ತನ ಸಭೆಗಳು” ಎಂಬ ವ್ಯಕ್ತಪಡಿಸುವಿಕೆಯು ಕ್ರಿಸ್ತನ ಸಭೆಯು ಇಲ್ಲಿರುವುದು, ಕರ್ತನ ವಾಗ್ದಾನವು ನೆರವೇರಲ್ಪಟ್ಟಿರುವುದು ಎಂಬುದನ್ನು ತೋರಿಸುತ್ತದೆ. ಇಂದು ನಾವು ಕ್ರಿಸ್ತನ ಸಭೆಯಂತೆ ಜೀವಿಸಬಹುದು ಎಂಬುದನ್ನು ಜ್ಞಾಪಕಕ್ಕೆ ತರುತ್ತದೆ. ಮೊದಲನೆಯ ಶತಮಾನದಲ್ಲಿ ಸಭೆಯು ಅಸ್ತಿತ್ವದಲ್ಲಿದ್ದರೆ, ಇಂದೂ ಸಹ ಅದು ಅಸ್ತಿತ್ವದಲ್ಲಿರುತ್ತದೆ.

ದೇವರ ರಾಜ್ಯದ ಆಶೀರ್ವಾದಗಳನ್ನು ನಾವು ಅನುಭವಿಸುವ ಮೊದಲು ದೇವರ ವಾಗ್ದಾನವು ನೆರವೇರುವುದಕ್ಕಾಗಿ ನಾವು ಕಾಯಬೇಕಾಗಿಲ್ಲ. ದೇವರ ಜಗತ್ತಿನ ಪೂರ್ಣತೆಯ ಮೇಲೆ ಮುಂತಿಳಿಸಿದ ಭರವಸೆಯೊಂದಿಗೆ, ಈಗ ನಾವು ಆತನ ರಾಜ್ಯವನ್ನು ರಕ್ಷಣೆಯ ಕರ್ತನ ಮಾರ್ಗದ ಮುಖಾಂತರ ಪ್ರವೇಶಿಸಬಹುದು ಹಾಗೂ ಆತನ ರಾಜ್ಯದ ಪ್ರಜಗಳಂತೆ ಜೀವಿಸಬಹುದು.

ಇಂದು ಕ್ರಿಸ್ತನ ಸಭೆಯ ಸನ್ನಿಧಿಯಲ್ಲಿ ಆನಂದಿಸೋಣ. ಕ್ರಿಸ್ತನ ಸಭೆಯು ವಾಸ್ತವಿಕತೆಯಾಗಿದೆ ಮತ್ತು ಜನಾಂಗ, ಕುಲ ಇಲ್ಲವೇ ಸಂಸ್ಕೃತಿಯ ಭಿನ್ನತೆಯಿಲ್ಲದೇ ಕ್ರಿಸ್ತನನ್ನು ಸ್ವೀಕರಿಸುವ ಪ್ರತಿಯೊಬ್ಬನಿಂದ ಆನಂದಿಸಲ್ಪಡಬಹುದು ಎಂಬ ಅದ್ಭುತಕರವಾದ ಸಮಾಚಾರವನ್ನು - ಜಗತ್ತಿಗೆ ಪ್ರಸಾರ ಮಾಡುವುದರಲ್ಲಿ ನನ್ನೊಂದಿಗೆ ಕೂಡಿಕೊಳ್ಳಿರಿ.

## ಒಂದು ಪರಿಶುದ್ಧವಾದ ಸಂಬಂಧ

ಎರಡನೆಯದಾಗಿ, "ಕ್ರಿಸ್ತನ ಸಭೆಗಳು" ಎಂಬ ನಾಮಾಂಕಿತವು ಕ್ರಿಸ್ತನಿಗೂ ಮತ್ತು ಸಭೆಗೂ ಮಧ್ಯದಲ್ಲಿ ಒಂದು ವಿಶೇಷ ಸಂಬಂಧವನ್ನು ಸೂಚಿಸುತ್ತದೆ. ಸಭೆಯು ಕ್ರಿಸ್ತನಿಂದ ಅದ್ವಿತೀಯವಾಗಿ ಸ್ವಾಸ್ಥ್ಯವಾಗಿ ತೆಗೆದು ಕೊಳ್ಳಲ್ಪಟ್ಟಿದೆ.

ಸಭೆಯನ್ನು ಕುರಿತು ಹೊಸ ಒಡಂಬಡಿಕೆಯಲ್ಲಿ ಒಂದು ಪ್ರಮುಖ ವಿಚಾರವು ಅದು ಯೇಸುವಿನಿಂದ ಸೃಷ್ಟಿಸಲ್ಪಟ್ಟಿತು ಮತ್ತು ಆತನಿಗೆ ಒಳಪಟ್ಟಿರುವುದು ಎಂಬುದಾಗಿದೆ. ಆತನ ಸಭೆಯ *ಸ್ಥಾಪಕನಂತೆ* ಚಿತ್ರೀಕರಿಸಲ್ಪಟ್ಟಿದ್ದಾನೆ. "ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನಂದರೆ - ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ 16:18) ಎಂದು ಆತನು ಹೇಳಿದನು. ಯೇಸುವು ಸಭೆಯನ್ನು ತನ್ನದೆಂದು ವಿಚಾರಿಸಿದನೇ ಹೊರತು, ಮನುಷ್ಯನದೆಂದು ವಿಚಾರಿಸಲಿಲ್ಲ. ಆತನು ಅದನ್ನು ತನ್ನ ರಕ್ತದಿಂದ ಕೊಂಡುಕೊಂಡನೆಂಬಂತೆ ಚಿತ್ರೀಕರಿಸಲ್ಪಟ್ಟಿದ್ದಾನೆ. ಪೌಲನು ಎಫೆಸದ ಹಿರಿಯರಿಗೆ ಅವರು, "ಆತನು [ಯೇಸುವು] ತನ್ನ ರಕ್ತದಿಂದ *ಕೊಂಡುಕೊಂಡ* ದೇವರ ಸಭೆಯನ್ನು" (ಅಪೊಸ್ತಲರ ಕೃತ್ಯಗಳು 20:28) ಪರಿಪಾಲಸಬೇಕೆಂದು ಹೇಳಿದನು. ಯೇಸುವು ಶಿಲುಬೆಯ ಮೇಲೆ ತನ್ನ ಯಜ್ಞಾರ್ಪಿತ ಮರಣದಿಂದ ಸಭೆಯನ್ನು ಸೃಷ್ಟಿಸಿದನು. ಇದಲ್ಲದೆ, ಸಭೆಯು ಈ ಭೂಲೋಕದಲ್ಲಿ ಕ್ರಿಸ್ತನ *ಆತ್ಮಿಕ ದೇಹದಂತೆ* ಕೊಡಲ್ಪಟ್ಟಿದೆ. ಪೌಲನು ಹೀಗೆ ಬರೆದನು, "ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ, ಹೇಗೆ ದೇಹದ ಅಂಗಗಳೆಲ್ಲವು ಅನೇಕವಾಗಿದ್ದು ಒಂದೇ ದೇಹವಾಗಿರುವುದೋ, ಹಾಗೆಯೇ ಕ್ರಿಸ್ತನು" (1 ಕೊರಿಂಥ 12:12); "ನೀವು ಕ್ರಿಸ್ತನ ದೇಹವು ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ" (1 ಕೊರಿಂಥ 12:27). ಕ್ರಿಸ್ತನು ದೇಹಕ್ಕೆ *ಶಿರಸ್ಸಾಗಿದ್ದಾನೆ.* "ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿಸಂಭೂತನು. ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ" (ಕೊಲೊಸ್ಸೆ 1:18) ಎಂದು ಪೌಲನು ಹೇಳಿದನು. ಸಭೆಯು ಕ್ರಿಸ್ತನ ಭೂಲೋಕದ ಕಾರ್ಯದ ನೆರವೇರುವಿಕೆಯಾಗಿದೆ ಆತನ ವಿಮೋಚನಾ ಯಜ್ಞದಿಂದ ನೈಸರ್ಗಿಕವಾದ ಪರಿಣಾಮವಾಗಿದೆ.

ಕ್ರಿಸ್ತನು ಸಭೆಯೊಂದಿಗೆ ಕಾಯ್ದುಕೊಂಡಿರುವ ಎಲ್ಲಾ ಭಿನ್ನವಾದ ಸಂಬಂಧಗಳನ್ನು ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳುವಾಗ, ಪೌಲನು ಸಭೆಯನ್ನು "ಕ್ರಿಸ್ತನ ಸಭೆ" ಯಂತೆ ಮಾತಾಡಿದ್ದು ನಮಗೆ ಆಶ್ಚರ್ಯವನ್ನುಂಟು ಮಾಡುವುದಿಲ್ಲ. ಸಾಧ್ಯವಾದ ಅತೀ ಆಳವಾದ ಅರ್ಥದಲ್ಲಿ ಸಭೆಯು ಕ್ರಿಸ್ತನ ಸಭೆಯಾಗಿದೆ. *ಒಬ್ಬನು ಆತನ ಸಭೆಯನ್ನು*

*ಪ್ರಸಂಗಿಸದೇ ಕ್ರಿಸ್ತನನ್ನು ಪ್ರಸಂಗಿಸಲಾರನು, ಮತ್ತು ಕ್ರಿಸ್ತನನ್ನು ಪ್ರಸಂಗಿಸದೇ ನಿಜವಾದ ಸಭೆಯನ್ನು ಪ್ರಸಂಗಿಸಲಾರನು.* ಯಾವನಾದರೂ ಕ್ರಿಸ್ತನಿಗೆ ನಿಜವಾಗಿ ಒಳಪಡುವವನು ಆತನ ಸಭೆಯಂತೆ ಆತನ ಸೇವೆ ಮಾಡುವನು. ಯಥಾರ್ಥವಾದ ಕ್ರಿಸ್ತನ ಸಭೆಯು ಕ್ರಿಸ್ತನಿಂದ ತನ್ನ ಗುರುತನ್ನು ಮತ್ತು ಗುಣವನ್ನು ಪಡೆದುಕೊಳ್ಳುವುದು, ಮತ್ತು ಕ್ರಿಸ್ತನ ನಿಜವಾದ ಸೇವಕನು ಕ್ರಿಸ್ತನ ಸಭೆಯಾಗಿರುವುದನ್ನು ಬಿಟ್ಟು ಬೇರೆಯಾಗುವುದನ್ನು ನಿರಾಕರಿಸುವನು. ಸಭೆಯು ಕ್ರಿಸ್ತನಿಗೆ ಒಳಪಟ್ಟು ಆತನಿಂದ ನಡಿಸಲ್ಪಡುವದಲ್ಲದೇ, ಅದು ಆತನ ಆತ್ಮಿಕ, ಭೂಲೋಕದ ದೇಹವಾಗಿದೆ.

ದಿವಂಗತ ಫೊಯ್ ಎಲ್. ಸ್ಮಿತ್, ಒಬ್ಬ ಪರಿಣಾಮಕಾರಿ, ಸಂಬಿಗಸ್ತ ಪ್ರಸಂಗಿಯು, ಸಭೆಯ ಕ್ರಿಸ್ತನ ಒಡೆತನವನ್ನು ಕುರಿತು ಒಂದು ಉದಾಹರಣೆಯನ್ನು ಉಪಯೋಗಿಸಿದನು, ನಿಮ್ಮ ಮನೆಯ ಮೇಲ್ಛಾವಣೆಯ ಮೇಲೆ ಯಾರೋ ಬಡಿಯುತ್ತಿರುವ ಶಬ್ದಕ್ಕೆ ಎಚ್ಚರಗೊಳ್ಳುವಿರಿ ಎಂದು ತಿಳಿಯಿರಿ, ಎಂದು ಅವರು ಹೇಳಿದರು. ನೀವು ನಿಮ್ಮ ಕಿವಿಗಳನ್ನು ನಂಬಲಾರದೇ ಹಾಸಿಗೆ ಬಿಟ್ಟು ಏಳುತ್ತೀರಿ, ನೀವು ಇನ್ನೂ ನಿದ್ರೆಯಲ್ಲಿರುವಿರೋ ಎಂದು ದೃಢಪಡಿಸಿಕೊಳ್ಳಲು ನಿಮ್ಮ ತಲೆಯನ್ನು ಅಲ್ಲಾಡಿಸುತ್ತೀರಿ, ನೀವು ನಿದ್ರಿಸುತ್ತಿಲ್ಲವೆಂದು ಕಂಡುಕೊಳ್ಳುವಿರಿ. "ಯಾರೋ ನನ್ನ ಮಾಳಿಗೆಯ ಮೇಲೆ ಕೆಲಸ ಮಾಡತ್ತಿರುವಂತೆ ಕಾಣುತ್ತದೆ, ಆದರೆ ನನ್ನ ಮೇಲಿನ ಮಾಳಿಗೆಯನ್ನು ರಿಪೇರಿ ಮಾಡಲು ಯಾರಿಗೂ ಹೇಳಿರುವುದಿಲ್ಲ. ನನ್ನ ಮೇಲ್ಮಾಳಿಗೆಯ ಮೇಲೆ ಯಾರಾದರೂ ಯಾಕೆ ಹೋಗಬೇಕು?" ಎಂದು ನೀವು ನಿಮ್ಮಷ್ಟಕ್ಕೆ ನೀವೇ ಹೇಳಿಕೊಳ್ಳುತ್ತೀರಿ. ನೀವು ಇನ್ನೂ ಎಚ್ಚರವಾಗಿರುವಿರೋ ಎಂಬುದನ್ನು ಕನ್ನಡಿಯಲ್ಲಿ ಪರೀಕ್ಷಿಸಿಕೊಳ್ಳವಿರಿ. ನೀವು ನೋಡುವದರಿಂದ ನೀವು ಭಯಪಡುವದಾದರೂ, ನೀವು ಇನ್ನೂ ದೇಹದಲ್ಲಿರುವಿರಿ ಎಂಬುದರ ಬಗ್ಗೆ ನಿಶ್ಚಿತತೆ ಹೊಂದುವಿರಿ. ನೀವು ಬೇಗನೇ ಕೆಲವು ಬಟ್ಟೆಗಳನ್ನು ಧರಿಸಿಕೊಂಡು ಏನು ನಡೆಯುತ್ತಿದೆ ಎಂಬುದನ್ನು ನೋಡಲು ಹೊರಗೆ ಹೋಗುವಿರಿ, ನೀವು ಹೊರಗೆ ಬರುವಾಗ, ಮೇಲ್ಮಾಳಿಗೆಯ ಕಡೆಗೆ ನೋಡುವಿರಿ. ನಿಮಗೆ ಸಂಪೂರ್ಣ ವಾಗಿ ದಿಗ್‌ಭ್ರಮೆಗೊಳ್ಳುವಂತೆ, ಮೇಲ್ಛಾವಣಿಯಲ್ಲಿ ಒಬ್ಬ ಮನುಷ್ಯನು ತಿಳುವಾದ ಹಲಿಗೆಗಳನ್ನು ತೆಗೆದು ಹಾಕುತ್ತಿರುವುದನ್ನು ನೋಡುವಿರಿ. ಅವನು ಈಗಾಗಲೇ ಮೇಲ್ಛಾವಣಿಯ ಒಂದು ಭಾಗವನ್ನು ತೆಗೆದು ಹಾಕಿರುವನು. "ನನ್ನ ಮೇಲ್ಛಾವಣಿಯನ್ನು ದುರಸ್ತಿಮಾಡಲು ನಿನ್ನನ್ನು ನಾನು ನೇಮಿಸಿಕೊಂಡಿರುವುದಿಲ್ಲ, ನೀವು ಅಲ್ಲಿ ಏನು ಮಾಡುತ್ತಿರುವಿ?" ಎಂದು ನಡುಗುತ್ತ ಅವನಿಗೆ ಪ್ರಶ್ನೆಮಾಡುವಿರಿ. "ಅಯ್ಯಾ, ನಾನು ನಿಮ್ಮ ಮನೆಯ ಮುಂದೆ ಬಹುಶಃ ಪ್ರತೀ ದಿನ ವಾಹನ ನಡಿಸಿಕೊಂಡು ಹೋಗುತ್ತೇನೆ. ನಾನು ಅದನ್ನು ಪ್ರತೀ ದಿನ ದಾಟಿ ಹೋಗುವಾಗ, ಅದರ ಕಡೆಗೆ ನೋಡುತ್ತೇನೆ, 'ಈ ಮನೆಯು ಕಟ್ಟಿರುವ ರೀತಿಯು ನನಗೆ ಮೆಚ್ಚಿಕೆಯಾಗಿರುವುದಿಲ್ಲ' ಎಂದು ನನ್ನಷ್ಟಕೆ ನಾನೇ ಹೇಳಿಕೊಳ್ಳುತ್ತೇನೆ. ಈ ವಾರಂತ್ಯದಲ್ಲಿ ನನಗೆ ಸ್ವಲ್ಪ ಸಮಯವಿದ್ದುದರಿಂದ, ನಾನು ಇಲ್ಲಿಗೆ ಬಂದು ನನ್ನ ಅಪೇಕ್ಷೆಗಳಿಗೆ ತಕ್ಕಂತೆ ನಿಮ್ಮ ಮನೆಯನ್ನು ಬದಲಾಯಿಸಲಿಕ್ಕೆ ಇದ್ದೇನೆ. ನನ್ನ ಕೆಲಸಕ್ಕಾಗಿ ನಿಮ್ಮಿಂದ ಸಂಬಳವನ್ನು ಕೇಳುವುದಿಲ್ಲ, ಸಲಕರಣೆಗಾಗಿ ಇಲ್ಲವೇ ನಾನು ಸಿದ್ಧಪಡಿಸಿದ ನಕ್ಷೆಗಾಗಿ ಏನನ್ನೂ ಕೇಳುವುದಿಲ್ಲ" ಎಂದು ಅವನು ಹೇಳಿದನು.

ಈ ಮನುಷ್ಯನಿಗೆ ನೀವು ಏನನ್ನು ಹೇಳುವಿರಿ? ಅವನನ್ನು ತೃಪ್ತಿಗೊಳಿಸುವುದಕ್ಕಾಗಿ ನೀವು ಈ ಮನೆಯನ್ನು ಕಟ್ಟಲಿಲ್ಲ ಎಂದು ಅವನಿಗೆ ಹೇಳುವಿರಿ. ನಿಮ್ಮ ಕುಟುಂಬದ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ನೀವು ಅದನ್ನು ಕಟ್ಟಿರುವಿರಿ, ಮತ್ತು ಅವನಿಗೆ ನಿಮ್ಮ ಮನೆಯು ಇಷ್ಟವಿಲ್ಲದಿದ್ದರೆ, ಅವನು ಅದನ್ನು ಬಿಟ್ಟು ಸುಮ್ಮನೇ ಹೊರಟುಹೋಗಬೇಕು

ಎಂದು ಹೇಳುವಿರಿ. ಅದನ್ನು ಬದಲಾಯಿಸಲು ಅವನಿಗೆ ಹಕ್ಕು ಇರುವುದಿಲ್ಲ, ಯಾಕಂದರೆ ಬದಲಾಯಿಸಲು ಅದು ಅವನ ಮನೆಯಾಗಿರುವುದಿಲ್ಲ ಎಂದು ಸ್ಪಷ್ಟಪಡಿಸುವಿರಿ.

---

*ಕ್ರಿಸ್ತನ ಸಭೆಯನ್ನು ಪ್ರಸಂಗಿಸದೇ ಒಬ್ಬನು*
*ಕ್ರಿಸ್ತನನ್ನು ಪ್ರಸಂಗಿಸಲಾರನು,*
*ಹಾಗೂ ಒಬ್ಬನು ಕ್ರಿಸ್ತನನ್ನು ಪ್ರಸಂಗಿಸದೇ*
*ನಿಜವಾದ ಸಭೆಯನ್ನು ಪ್ರಸಂಗಿಸಲಾರನು.*

---

ತನ್ನ ಸಭೆಯನ್ನು ಕುರಿತು ಮನುಷ್ಯನಿಂದ ಕರ್ತನು ಅದೇ ಉತ್ತರವನ್ನು ಪಡೆದುಕೊಂಡಿರುವನಲ್ಲವೇ? ‘‘ಕರ್ತನೇ, ನೀನು ಏರ್ಪಡಿಸುವ ರೀತಿ ಯಲ್ಲಿ ಸಭೆಯಿರುವುದು ನನ್ನ ಮನಸ್ಸಿಗೆ ಬರುವುದಿಲ್ಲ. ನಾನು ಅದನ್ನು ಬದಲಾಯಿಸಲಿಕ್ಕಿದ್ದೇನೆ’’ ಎಂದು ಮನುಷ್ಯನು ಹೇಳಿದನು. ಹಟಮಾರಿ ಧಾರ್ಮಿಕ ಜನರು ಕರ್ತನ ಸಭೆಯನ್ನು ಮಾನವ ನಿರ್ಮಿತ ಸಂಸ್ಥೆಯನ್ನಾಗಿ ಮಾಡುವದನ್ನು ತಮ್ಮ ಮೇಲೆ ತೆಗೆದು ಕೊಂಡಿದ್ದಾರೆ. ಹೀಗಿದ್ದರೂ, ಸತ್ಯವು ಇದಾಗಿದೆ: ನಮ್ಮ ವೈಯಕ್ತಿಕ ಮನೆಗಳು ನಮಗೆ ಒಳಪಟ್ಟಿರುವಂತೆ, ಸಭೆಯು ಕ್ರಿಸ್ತನಿಗೆ ಒಳಪಟ್ಟಿರುತ್ತದೆ. ಅದರ ಬಗ್ಗೆ ಯಾವುದನ್ನೂ ಬದಲಾಯಿಸುವ ಹಕ್ಕು ಯಾವುದೇ ಮನುಷ್ಯನಿಗಾದರೂ ಇಲ್ಲವೇ ಗುಂಪಿಗಾದರೂ ಇರುವುದಿಲ್ಲ. ಅದು ಕ್ರಿಸ್ತನ ಸಭೆಯಾಗಿರುತ್ತದೆ.

ಕರ್ತನ ಸಭೆಯ ಬಗ್ಗೆ ಯಾರಿಗಾದರೂ ಯಾವುದೇ ವಾದವಿದ್ದರೂ ಅದನ್ನು ಕ್ರಿಸ್ತನೊಂದಿಗೆ ತೆಗೆದುಕೊಳ್ಳಲ್ಪಡತಕ್ಕದ್ದು, ಯಾಕಂದರೆ ಸಭೆಯು ಆತನ ಒಡೆತನದಲ್ಲಿಯೂ ಅಧಿಕಾರದಲ್ಲಿಯೂ ಇರುವುದು. ಆತನು ಅದರ ಶಿರಸ್ಸಾಗಿದ್ದಾನೆ, ಮತ್ತು ಅದು ಆತನು ಆಯ್ದುಕೊಳ್ಳುವಂತೆ ರೂಪಿಸುವುದು ಹಾಗೂ ನಿರ್ದೇಶಿಸುವುದು ಆತನದಾಗಿರುತ್ತದೆ.

ಕ್ರಿಸ್ತನೊಂದಿಗೆ ಆತನ ಸಭೆಯಂತೆ ನಮ್ಮ ವಿಶೇಷ ಸಂಬಂಧವನ್ನು ಒಪ್ಪಿಕೊಳ್ಳೋಣ. ಆತನ ದೇಹದಂತೆ, ಆತನ ಚಿತ್ತವನ್ನು ಮಾಡಲು ನಾವು ಜೀವಿಸುತ್ತೇವೆ. ನಮಗಾಗಿ, ಪೌಲನ ಮಾತುಗಳು ಯಾವಾಗಲೂ ಸಮಯೋಚಿತವಾದವುಗಳಾಗಿವೆ: ‘‘ನಾನೀಗ ಯಾರನ್ನು ಒಲಿಸಿಕೊಳ್ಳುತ್ತಾ ಇದ್ದೇನೆ? ಮನುಷ್ಯರನ್ನೋ? ದೇವರನ್ನೋ? ನಾನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾ ಇದ್ದೇನೋ? ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ ನಾನು ಕ್ರಿಸ್ತನ ದಾಸನಲ್ಲ’’ (ಗಲಾತ್ಯ 1:10).

## ಒಂದು ಪರಿಶುದ್ಧ ಬರಹದ ಉಲ್ಲೇಖ

ಮೂರನೆಯದು, ‘‘ಕ್ರಿಸ್ತನ ಸಭೆ’’ ಎಂಬ ವ್ಯಕ್ತಪಡಿಸುವಿಕೆಯು ಸಭೆಯು ಪರಿಶುದ್ಧ ಬರಹಗಳಲ್ಲಿ ಗುರುತಿಸಲ್ಪಟ್ಟ ಒಂದು ವಿಧಾನವನ್ನು ಪ್ರಕಟಿಸುತ್ತದೆ. ಪರಿಶುದ್ಧಾತ್ಮನಿಂದ ನಿರ್ದೇಶಿಸಲ್ಪಟ್ಟು ಪೌಲನು ಸಭೆಯನ್ನು ಕ್ರಿಸ್ತನ ಸಭೆ ಎಂದು ವಿವರಿಸುತ್ತಾನೆ.

ಜಗತ್ತಿನೊಳಗೆ ಯೇಸುವಿನ ಸಭೆಯ ಬರೋಣವು ಒಂದು ಐತಿಹಾಸಿಕ ಘಟನೆಯಾಗಿತ್ತು. ಅದರ ಕಡೆಗೆ ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಮೊದಲನೆಯ ಭಾಗವು (ನಾಲ್ಕು ಸುವಾರ್ತೆಗಳು) ಮುನ್ನೋಡಿದ್ದವು. ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಮೊದಲಿನ ಭಾಗದ ಮುಖಾಂತರ ದೇವರ ಯೋಚನೆಯ ಪ್ರಕಟನೆಯನ್ನು ಅನುಸರಿಸುವವನು ಈ ಘಟನೆಯ ಮೇಲೆ ಒತ್ತಡ ಕೊಡಲ್ಪಟ್ಟಿದ್ದು, ಈ ಪ್ರಶ್ನೆಯನ್ನು ಕೇಳಲು ಪ್ರಚೋದಿಸಲ್ಪಡುವನು, ‘‘ಸಭೆಯು

ಬರುವಾಗ ಅದನ್ನು ಹೊಸ ಒಡಂಬಡಿಕೆಯ ಬರಹಗಾರರು ಹೇಗೆ ಉಲ್ಲೇಖಿಸುವರು? ಯಾವ ಹುದ್ದೆಗಳು ಅದಕ್ಕಾಗಿ ಉಪಯೋಗಿಸಲ್ಪಡುವವು?''

ಒಬ್ಬನು ಅಧ್ಯಯನವನ್ನು ಮುಂದುವರಿಸಿದಂತೆ ಹಲವಾರು ಉಲ್ಲೇಖಗಳೂ ವಿವರಣೆಗಳೂ ಉಪಯೋಗಿಸಲ್ಪಟ್ಟದ್ದನ್ನು ಕಂಡು ಕೊಳ್ಳುವನು. ಅದು, ''ದೇವರ ಸಭೆ'' (1 ಕೊರಿಂಥ 1:2) ಇಲ್ಲವೇ ''ದೇವರ ಸಭೆಗಳು'' (1 ಥೆಸಲೊನೀಕ 2:14); ಅದು ''ಚೊಚ್ಚಲುಮಕ್ಕಳ ಸಭೆ'' ಆಗಿರುತ್ತದೆ (ಇಬ್ರಿಯ 12:23); ಅದು ''ದೇವ ಜನರ (ಪರಿಶುದ್ಧ ಜನರ) ಸಭೆಗಳು'' ಆಗಿರುತ್ತದೆ (1 ಕೊರಿಂಥ 14:34); ಹೆಚ್ಚಾದ ಸಲ ಅದು ''ಸಭೆ'' (ಎಫೆಸ 1:22) ಇಲ್ಲವೇ ಒಂದು ಸ್ಥಳದ ಸಭೆಯಂತೆ, ''ಆಸ್ಯಸೀಮೆಯ ಸಭೆಗಳಂತೆ'' (1 ಕೊರಿಂಥ 16:19) ಆಗಿರುತ್ತದೆ.[1]

ಹೊಸ ಒಡಂಬಡಿಕೆಯ ಸಭೆಗೆ ಪರಿಶುದ್ಧಾತ್ಮನಿಂದ ಒಂದು ಹೆಸರು ಕೊಡಲ್ಪಡಲಿಲ್ಲ; ಪರಿಶುದ್ಧ ಬರಹಗಳಲ್ಲಿ ಅದು ಮೌಂಟ್ ಕಾಲ್ವರಿ ಚರ್ಚ್, ಚೀಯೋನ ಚರ್ಚ್ ಅಫ್ ರಿಡೆಮ್‌ಟಿವ್ ಗ್ರೇಸ್, ದ ಚರ್ಚ್ ಆಫ್ ದ ಹೋಲಿ ಸೆಪುಲ್ಕರ್, ಇತ್ಯಾದಿಯಂತೆ ಉಲ್ಲೇಖಿ ಸಿದ್ದನ್ನು ಎಂದೂ ನೋಡುವುದಿಲ್ಲ. ಅದರ ಒಡೆಯನಾಗಿರುವಾತನ. ಅದರಲ್ಲಿರುವವರ ಅದು ಎಲ್ಲಿರುವುದೋ ಅದರ, ಇಲ್ಲವೇ ಅದು ಏನಾಗಿರುವುದೋ ಅದರ ಮಾತುಗಳಲ್ಲಿ ಹೆಸರುಗೊಂಡಿದೆ, ಆದರೆ ಅದಕ್ಕೆ ಒಂದು ಹೆಸರು ಎಂದೂ ಇಡಲ್ಪಟ್ಟಿರುವುದಿಲ್ಲ.

ಪರಿಶುದ್ಧ ಬರಹಗಳಲ್ಲಿ ''ಸಭೆಯು'' ಸುಂದರವಾದ ಸರಳ ರೀತಿಯಲ್ಲಿ ಹೇಳ ಲ್ಪಟ್ಟದ್ದರಿಂದ ನಾವು ಆಕರ್ಷಿಸಲ್ಪಟ್ಟಿದ್ದೇವೆ. ಹೊಸ ಒಡಂಬಡಿಕೆಯ ದಿನಗಳಲ್ಲಿ, ಒಬ್ಬನು ಅದರಲ್ಲಿದ್ದನು ಇಲ್ಲವೇ ಅದರಲ್ಲಿ ಇರಲಿಲ್ಲ; ಒಬ್ಬನು ಸಭೆಯಲ್ಲಿ ಇದ್ದನು ಇಲ್ಲವೇ ಜಗತ್ತಿನಲ್ಲಿ ಇದ್ದನು. ಇಂದು, ಸಭಾಪಂಗಡತ್ವವು ಅದರ ಮಾನವ ನಿಯಮ ಗಳನ್ನು ಮತ್ತು ಮಾನವ ಹೆಸರುಗಳಿಂದ ಕೂಡಿ ಬಹಳವಾಗಿದ್ದರಿಂದ, ಧಾರ್ಮಿಕ ಜಗತ್ತಿನಿಂದ ಅವಿಶ್ವಾಸಿಗೆ ಚಿತ್ರಿಸಲ್ಪಟ್ಟ ಚಿತ್ರವು, ಚುರುಕಾದ ಮತ್ತು ಅತೀ ಬುದ್ಧಿವಂತ ಜನರನ್ನು ಗಲಿಬಿಲಿಗೊಳಿಸುವ, ದಿಗ್‌ಭ್ರಮೆಗೊಳಿಸುವ ಕ್ರಮವಿಲ್ಲದ ಸಮೂಹವಾ ಗಿದೆ. ಜಗತ್ತಿನಲ್ಲೆಲ್ಲಾ ಸಭಾಪಂಗಡತ್ವ ಅಳಿಸಿಬಿಡುವ ಪ್ರಭಾವ ಮತ್ತು ಇರುವಿಕೆಯು ಮಾಡಿದಂತೆ ಬೇರೆ ಒಡಂಬಡಿಕೆಯ ಸಭೆಯನ್ನು ಐಕ್ಯತೆಯನ್ನು, ಸರಳತೆಯನ್ನು ಮತ್ತು ಸೌಂದರ್ಯವನ್ನು ಹಾಳು ಮಾಡಿರುವುದಿಲ್ಲ. ಹೊಸ ಒಡಂಬಡಿಕೆಯ ಕರೆಯು ನಾವು ಹೊಸ ಒಡಂಬಡಿಕೆಯ ಕ್ರೈಸ್ತರಾಗಿರುವುದಕ್ಕೆ ಇರುತ್ತದೆ, ಹೊಸ ಒಡಂಬಡಿಕೆಯ ಸಭೆಯ ಸದಸ್ಯರು ಆಗಿರಬೇಕು, ಕ್ರಿಸ್ತನಿಗೆ ಮತ್ತು ಆತನ ವಾಕ್ಯಕ್ಕೆ, ಹೊಸ ಒಡಂಬಡಿಕೆಗೆ ನಾವು ವಿಧೇಯತೆಯೊಂದಿಗೆ ಇರಬೇಕು.

ಹೊಸ ಒಡಂಬಡಿಕೆಯ ಒಂದು ಗುರುತನ್ನು ಸಭೆಗಾಗಿ ಆಯ್ದುಕೊಂಡು ಅದನ್ನು ನಮ್ಮ ಗುಂಪಿನಂತೆ ಸಭಾಪಂಗಡವಾಗಿ ಮಾಡಿಕೊಂಡು, ಹೊಸ ಒಡಂಬಡಿಕೆಯು ಉಪಯೋಗಿಸುವ ಇತರ ಎಲ್ಲವುಗಳನ್ನು ಒದಗಿಸುವುದು ಇಲ್ಲವೇ ಬಿಟ್ಟು ಬಿಡುವುದು ತಪ್ಪಾಗಿರುತ್ತದೆ. ನಿಜವಾದ ಹೊಸ ಒಡಂಬಡಿಕೆಯ ಸಭೆಯು ಅದಕ್ಕೆ ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಎಲ್ಲಾ ನಾಮಾಂಕಿತಗಳಿಂದಲೂ ವಿವರಣೆಗಳಿಂದಲೂ ತಿಳಿಯಲ್ಪಡತಕ್ಕದ್ದು. ಪ್ರತಿಯೊಂದು ವ್ಯಕ್ತಪಡಿಸುವಿಕೆಯು ಸಭೆಯು ಏನಾಗಿರುತ್ತದೆ, ಅದರ ಒಡೆಯನು ಯಾರು, ಇಲ್ಲವೇ ಅದರಲ್ಲಿ ಯಾರು ಇರುವರು ಎಂಬುದರ ಬಗ್ಗೆ ಮಹತ್ವದ ಒಳನೋಟವನ್ನು ಕೊಡುತ್ತದೆ. ಪ್ರತಿಯೊಂದು ಉಲ್ಲೇಖವು ಮೌಲ್ಯವುಳ್ಳ ದ್ದಾಗಿದೆ ಮತ್ತು ಸಭೆಯ ಬಗ್ಗೆ ಉಪಯೋಗಿಸಲ್ಪಡತಕ್ಕದ್ದು. ಆದರೆ ಅವು ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟ ರೀತಿಯಲ್ಲಿಯೇ ಉಪಯೋಗಿಸಲ್ಪಡತಕ್ಕದ್ದು. ಸಭೆಯನ್ನು ಕುರಿತು ಧರ್ಮದಲ್ಲಿ ಅತಿಯಾದ ಗಲಿಬಿಲಿಗೆ ಎರಡು ಕಾರಣಗಳು, ಹೊಸ

ಒಡಂಬಡಿಕೆಗೆ ತಿಳಿಯದೇ ಇರುವ ಹೆಸರುಗಳನ್ನು ಸಭೆಗಾಗಿ ಉಪಯೋಗಿಸುವುದು ಮತ್ತು ಸಭೆಗಾಗಿ ಹೊಸ ಒಡಂಬಡಕೆಯ ನಾಮಾಂಕಿತಗಳನ್ನು ದುರುಪಯೋಗ ಪಡಿಸಿಕೊಳ್ಳುವುದು.

ಹೊಸ ಒಡಂಬಡಿಕೆಯನ್ನು ಅನುಸರಿಸುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದ ಆದರೆ ಅದರ ಬಗ್ಗೆ ಯಾವುದೇ ಪುರಾವೆಯನ್ನು ತೋರಿಸದೇ ಇದ್ದ ಒಂದು ಸಭಾಪಂಗಡದ ಗುಂಪಿನ ಬಗ್ಗೆ ಒಂದು ಕಥೆಯು ಹೇಳಲ್ಪಡುತ್ತದೆ. ಅವರು ತಮ್ಮ ಕಟ್ಟಡದ ಮುಂದೆ ಬಂದು ಹೊಸ ಗುರುತಿನ ಬೋರ್ಡನ್ನು ಹಾಕಲಿಕ್ಕಿದ್ದರು, ಒಬ್ಬ ಹೊಸ ಒಡಂಬಡಿಕೆಯ ಕ್ರೈಸ್ತನು ಅವರ ಒಬ್ಬ ಹೊಸ ಒಡಂಬಡಕೆಯ ಕ್ರೈಸ್ತನು ಅವರ ಒಬ್ಬ ಸದಸ್ಯನೊಂದಿಗೆ ಮಾತಾಡುತ್ತ, "ನಮ್ಮ ಕಟ್ಟಡದ ಮುಂದೆ ನಿಮ್ಮ ಗುಂಪು ಒಂದು ಹೊಸ ಸಂಕೇತವನ್ನು ಹಾಕುವುದೆಂದು ಕೇಳಿದ್ದೇನೆ" ಎಂದು ಅವನಿಗೆ ಹೇಳಿದನು. ಆಗ ಸದಸ್ಯನು, "ಹೌದು, ಅದರ ಬಗ್ಗೆ ನಮಗೆ ಬಹಳ ಹೆಮ್ಮೆಯಿದೆ" ಎಂದು ಹೇಳಿದನು. ಅದಕ್ಕೆ ಕ್ರೈಸ್ತನು, "ನಿಮ್ಮ ಸಭಾಪಂಗಡದ ಹೆಸರನ್ನು ಬರೆಯದೆ 'ಇದು ಕ್ರಿಸ್ತನ ಸಭೆ' ಎಂದು ಸಂಕೇತದ ಮೇಲೆ ಬರೆದರೆ ನಿಮ್ಮ ಬೋರ್ಡಿಗೆ ತಗಲುವ ವೆಚ್ಚಕ್ಕಾಗಿ ಐವತ್ತು ಡಾಲರನ್ನು ಕೊಡುಗೆಯಾಗಿ ಕೊಡುವೆನು" ಎಂದು ಹೇಳಿದನು. ಅದಕ್ಕೆ ಸದಸ್ಯನು, "ಇಲ್ಲವೇ ಇಲ್ಲ! ನಾವು ಅದನ್ನು ಮಾಡಲಾರೆವು; ನಮ್ಮ ಸಭಾಪಂಗಡದ ಹೆಸರನ್ನು ನಾವು ಅದರ ಮೇಲೆ ಹಾಕಲೇ ಬೇಕು" ಎಂದು ಉತ್ತರ ಕೊಟ್ಟನು. ಆಗ ಕ್ರೈಸ್ತನು, "ಹಾಗಿರಲಿ, ನಿಮ್ಮ ಬೋರ್ಡಿನ ಮೇಲೆ 'ಇದು ಕ್ರಿಸ್ತನ ಸಭೆಯಾಗಿರುವುದಿಲ್ಲ' ಎಂದು ಬರೆದರೆ, ನಾನು ಅದರ ಖರ್ಚಿಗಾಗಿ ಐವತ್ತು ಡಾಲರ ಕೊಡುಗೆಯನ್ನು ಕೊಡುವೆನು" ಎಂದು ಹೇಳಿದನು. ಅದಕ್ಕೆ ಆ ಸದಸ್ಯನು, "ನಾವು ಅದನ್ನು ಮಾಡಲಾರೆವು; ನಾವು ಕ್ರಿಸ್ತನ ಒಂದು ಸಭೆಯಾಗಿದ್ದೇವೆ" ಎಂದು ಹೇಳಿದನು.

ಈ ಚಿಕ್ಕ ಕಥೆಯು ಸತ್ಯವಾದದ್ದಾಗಿದೆಯೆಂದು ನಂಬಲಾಗಿದೆ. ಒಂದು ಗುಂಪು ತಾನು ಕ್ರಿಸ್ತನ ಸಭೆ ಎಂದು ಹೇಳಿಕೊಂಡು, ಅದನ್ನು ತಮ್ಮ ಸಂಕೇತದ ಮೇಲೆ ಇಡದೇ ಅದರ ಬದಲು ತಮ್ಮ ಸಭಾಪಂಗಡದ ಹೆಸರನ್ನು ಬರೆಯುವುದು ವಿಚಿತ್ರವಾಗಿರುವದಿಲ್ಲವೋ? ನಮ್ಮ ನಿಷ್ಠೆಯು ನಾವು ಧರಿಸಲು ಆಯ್ದುಕೊಳ್ಳುವ ಹೆಸರು ಇಲ್ಲವೇ ನಾಮಾಂಕಿತವನ್ನು ನಿರ್ಧರಿಸುತ್ತದೆ.

ಅಬ್ರಹಾಮ ಲಿಂಕನ್ನನ್ನು ಬಂದು ಒಬ್ಬ ಮನುಷ್ಯನಿಗೆ, "ಕರುವಿನ ಬಾಲವನ್ನು ನಾವು ಕಾಲು ಎಂದು ಕರೆದರೆ, ಕರುವಿಗೆ ಎಷ್ಟು ಕಾಲುಗಳಿರುವವು?" ಎಂದು ಕೇಳಿದನು. ಆ ಮನುಷ್ಯನು ಕೂಡಲೇ, "ಅದಕ್ಕೆ ಐದು ಕಾಲುಗಳಿರುವುದು" ಎಂದು ಉತ್ತರಕೊಟ್ಟನು. ಲಿಂಕನ್ನನು, "ಇಲ್ಲ. ಕರುವಿಗೆ ಕೇವಲ ನಾಲ್ಕು ಕಾಲುಗಳಿರುತ್ತವೆ. ಬಾಲವನ್ನು ಕಾಲು ಎಂದು ಕರೆಯುವುದು ಬಾಲವನ್ನು ಕಾಲನ್ನಾಗಿ ಮಾಡುವುದಿಲ್ಲ" ಎಂದು ಉತ್ತರ ಕೊಟ್ಟರು. ಅವನ ಹೇಳಿಕೆಯ ಉತ್ತರವು ತಪ್ಪಾಗಿರುವುದಿಲ್ಲ. "ಒಂದು ಗುಂಪು ತನ್ನನ್ನು ಕ್ರಿಸ್ತನ ಸಭೆ ಎಂದು ಕರೆದು ಕೊಂಡರೆ, ಅದು ತನ್ನಲ್ಲಿ ಮತ್ತು ತಾನೇ, ಅವರು ಕ್ರಿಸ್ತನ ಸಭೆಯಾಗಿರುವರು" ರುಜುವಾತು ಪಡಿಸುವುದಿಲ್ಲ. ಹೀಗಿದ್ದರೂ, ಇನ್ನೊಂದು ವಿಚಾರವು, ಯೋಚಿಸಲ್ಪಡತಕ್ಕದ್ದು: ನಾವು ನಿಜವಾಗಿಯೂ ಕ್ರಿಸ್ತನ ಸಭೆಯಾಗಿರಲು ಹುಡುಕುತ್ತಿದ್ದರೆ, *ನಾವು ನಿಶ್ಚಯವಾಗಿ ನಮ್ಮನ್ನು ಅದರಂತೆ ಸಂಬಂಧಿಸಿಕೊಳ್ಳಲ್ಪಡಬೇಕು. ನಾವಿರುವಂತೆ ಕರೆಯಲ್ಪಡುವುದನ್ನು ನಿರಾಕರಿಸುವುದು, ನಾವಿಲ್ಲದಿರುವಂತೆ ನಮ್ಮನ್ನು ಕರೆದುಕೊಳ್ಳುವಂತೆ ಅದು ಸರಿಯಾದದ್ದಾಗಿರುವುದಿಲ್ಲ.*

ಧಾರ್ಮಿಕ ಜಗತ್ತಿಗಾಗಿ ಇಂದು ಇರುವ ನಿಜವಾದ ಅಗತ್ಯತೆಯು ಎಂದೂ ಹೆಚ್ಚು ಸ್ಪಷ್ಟವಾಗಿರುವುದಿಲ್ಲ: ಕ್ರಿಸ್ತನನ್ನೂ ಆತನ ವಾಕ್ಯವನ್ನೂ ಬಿಟ್ಟು ಬೇರೆ ಯಾವುದಕ್ಕೂ

ನಿಷ್ಠೆ ಇಲ್ಲದಿರುವವರೊಂದಿಗೆ ಹೊಸ ಒಡಂಬಡಿಕೆಯ ಸಭೆಯಂತೆ ನಾವು ಬೈಬಲಿಗೆ ಹೋಗತಕ್ಕದ್ದು ಮತ್ತು ಹೊಸ ಒಡಂಬಡಿಕೆಯ ಕ್ರೈಸ್ತರಾಗಿರತಕ್ಕದ್ದು. ನಮ್ಮ ಧಾರ್ಮಿಕ ಜಗತ್ತಿನಲ್ಲಿ ಸಭೆಗಳು ಕೇವಲ "ಸಭೆ" ಆಗಿದ್ದರೆ ಮತ್ತು ಕ್ರೈಸ್ತರು ಕೇವಲ ಕ್ರೈಸ್ತರಾಗಿದ್ದರೆ, ಧಾರ್ಮಿಕ ಗಲಿಬಿಲಿಯು ಸೂರ್ಯ ಬೆಳಕಿನ ಮುಂದೆ ಮಂಜು, ಉದಯದ ಮೊದಲು ಕತ್ತಲೆಯು ಕಣ್ಮರೆಯಾಗುವಂತೆ ಹೋಗಿಬಿಡುವುದು. ಯಾವುದೇ ರೀತಿಯ ಕಾಯ್ದಿಡುವಿಕೆಗಳು ಬೆಳಿಸಲ್ಪಡಬಾರದು; ಕ್ರಿಸ್ತನಿಗೆ ಮತ್ತು ಆತನ ವಾಕ್ಯಕ್ಕೆ ಮಾತ್ರವೇ ನಮ್ಮ ಹೃದಯಗಳನ್ನು ಮತ್ತು ಸೇವೆಯನ್ನು - ಅದೇನೇ ಆದರೂ, ಅದೆಲ್ಲಿಗೇ ನಡಿಸಿದರೂ, ಮತ್ತು ಅದಕ್ಕೆಷ್ಟು ಕ್ರಯವಾದರೂ ಕೊಡತಕ್ಕದ್ದು.

## ಮುಕ್ತಾಯ

"ಕ್ರಿಸ್ತನ ಸಭೆಗಳು" ಎಂಬ ಮಾತು ಚಿಕ್ಕದಾಗಿದ್ದರೂ ಮತ್ತು ಹೆಚ್ಚಿನ ಮಟ್ಟಿಗೆ ಗಮನಿಸಲ್ಪಡದೇ ಇದ್ದುದಾಗಿದ್ದರೂ, ಕೇಳುವವನಿಗೆ ಯಾರೇ ಆಗಿರಲಿ ಅವರಿಗೆ ಬಲವಾದ ಸಂದೇಶವುಳ್ಳದ್ದಾಗಿರುವುದು. ಅನ್ವಯದಿಂದ, ಅದು ಸಭೆಯ ಬಗ್ಗೆ ಮಹತ್ವದ ಸತ್ಯಗಳನ್ನು ಪ್ರಕಟಿಸುವುದು, ಮೊದಲನೆಯದು, ಅದು ಸಭೆಯ ವಾಸ್ತವಿಕತೆಯನ್ನು ಪ್ರಕಟಿಸುವುದು. ಪೌಲನು ರೋಮಾಪುರದವರಿಗೆ ಬರೆದಾಗ, ಕ್ರಿಸ್ತನ ಅನೇಕ ಸಭೆಗಳು ಜಾಗತಿಕ ನಕಾಶೆಯಲ್ಲಿ ನಮೂದಿಸಲ್ಪಟ್ಟಿದ್ದವು. ಎರಡನೆಯದು, ಕ್ರಿಸ್ತನಿಗೂ ಮತ್ತು ಸಭೆಗೂ ಮಧ್ಯದಲ್ಲಿಯ ಅತೀ ಮಹತ್ವದ ಸಂಬಂಧವನ್ನು ಸೂಚಿಸುತ್ತದೆ. ಸಭೆಯು ಕ್ರಿಸ್ತನ ಸಭೆಯಾಗಿದೆ, ಅದು ಆತನಿಗೆ ಒಳಪಟ್ಟಿದೆ ಮತ್ತು ಅದು ಆತನ ಆತ್ಮಿಕ ದೇಹದಂತೆ ಕಾರ್ಯಮಾಡುತ್ತದೆ. ಮೂರನೆಯದು, ಈ ಮಾತು ಪೌಲನ ದಿನದಲ್ಲಿ ಹೊಸ ಒಡಂಬಡಿಕೆಯ ಸಭೆಯು ನಾಮಾಂಕಿತಗೊಂಡ ಒಂದು ರೀತಿಯನ್ನು ತೋರಿಸುವುದು.

ನಮ್ಮ ಕರ್ತನ ನ್ಯಾಯವಿಚಾರಣೆಯ ರಾತ್ರಿಯಲ್ಲಿ, ಪೇತ್ರನು ಅಂಗಳದಲ್ಲಿ ಒಂದು ಜನರ ಗುಂಪು ಕೂಡಿದ್ದ ಸ್ಥಳದಲ್ಲಿ ಕಾದುಕೊಂಡಿದ್ದನು. ಅವನು ದ್ವಾರದ ಕಡೆಗೆ ಹೋದಂತೆ, ಅವನು ಅಲ್ಲಿ ನಿಂತವನೊಬ್ಬನಿಂದ ಪ್ರಶ್ನಿಸಲ್ಪಟ್ಟು. "ನಿಶ್ಚಯವಾಗಿ ನೀನು ಸಹ ಅವರಲ್ಲಿ ಒಬ್ಬನು, ನಿನ್ನ ಭಾಷೆಯೇ ನಿನ್ನನ್ನು ತೋರಿಸಿಕೊಡುತ್ತದೆ" ಎಂದು ಕೇಳಿದನು (ಮತ್ತಾಯ 26:73). ಪೇತ್ರನು ಜನಸಮೂಹದೊಂದಿಗೆ ಕಾದುಕೊಂಡಿದ್ದಾಗ ಇತರರೊಂದಿಗೆ ಬಹಳವಾಗಿ ಮಾತಾಡಿರಲಿಲ್ಲವೆಂದು ತೋರುತ್ತದೆ; ಆದರೆ ಅಲ್ಲಿ ನಿಂತುಕೊಂಡಿದ್ದ ಒಬ್ಬನೊಂದಿಗಾದರೂ, ಅವನನ್ನು ಯೇಸುವಿನ ಹಿಂಬಾಲಕರೊಂದಿಗೆ ಇದ್ದವನೆಂದು ಗುರುತಿಸುವಷ್ಟು ಅವನು ಮಾತಾಡಿರಬೇಕು. ಈ ವಿಷಯದಲ್ಲಿ ಅವನ ಗುರುತನ್ನು ಕೆಲವೇ ಮಾತುಗಳು ಪ್ರಕಟಿಸಿದವು.

"ಕ್ರಿಸ್ತನ ಸಭೆಗಳು" ಎಂಬ ಪದಗಳು, ಸಭೆಯು ಏನಾಗಿರುತ್ತದೆ ಎಂಬುದಕ್ಕೆ ನಮ್ಮ ಕಣ್ಣುಗಳನ್ನು ತೆರೆಯುವುದರಿಂದ ಮತ್ತು ನಮ್ಮ ನಿಷ್ಠೆ ಮತ್ತು ಪ್ರೀತಿಗಾಗಿ ನಮಗೆ ಯೋಗ್ಯವಾದ ಕೇಂದ್ರೀಕರಣವನ್ನು ಕೊಡುವದಿಂದ ಕ್ರೈಸ್ತರ ನಿಜವಾದ ಗುರುತಿಸುವಿಕೆಯನ್ನು ಪ್ರಕಟಿಸುತ್ತವೆ. ಸಭೆಯು ಕ್ರಿಸ್ತನ ಸ್ವಾಸ್ಥ್ಯವಾಗಿದೆ, ಆತನ ಆತ್ಮಿಕ ದೇಹವಾಗಿದೆ.

ಸಭೆಯು ಸ್ಪಷ್ಟವಾಗಿ "ಕ್ರಿಸ್ತನ ಸಭೆ" ಎಂದು ಕರೆಯಲ್ಪಡುವುದಕ್ಕಾಗಿ ಅದಕ್ಕೆ ಯಾವುದೇ ಹೆಚ್ಚು ದೊಡ್ಡ ಅಭಿನಂದನೆ ಕೊಡಬೇಕಾಗಿಲ್ಲ. ಕ್ರಿಸ್ತನ ಸಭೆಯಂತೆ ತಮ್ಮನ್ನು ಸಂಬೋಧಿಸಿಕೊಳ್ಳುವುದರಲ್ಲಿ ಅಡಗಿರುವ ಹಿರಿಯಾಶೆಗಿಂತ ಕ್ರೈಸ್ತರ ಒಂದು ಗುಂಪಿನಿಂದ ಯಾವುದೆ ಹೆಚ್ಚು ಉತ್ತಮವಾದ ತೀರ್ಮಾನ ಮಾಡಿಕೊಳ್ಳ ಬೇಕಾಗಿರುವುದಿಲ್ಲ. ವಿನ್ಸಸ್ಟನ್ ಚರ್ಚಿಲ್ ಅವರು, "ಯಾರದರಲ್ಲಿ ಸದ್ಗುಣವನ್ನು ಸೃಷ್ಟಿಸಲು ಅತ್ಯುತ್ತಮವಾದ

ಮಾರ್ಗವು ಆ ಸದ್ಗುಣವನ್ನು ಅವರಲ್ಲಿ ಹೊರಿಸುವುದಾಗಿದೆ" ಎಂದು ಹೇಳಿದರು. ನಾವು ನಮ್ಮನ್ನು ಕ್ರಿಸ್ತನ ಸಭೆಯಂತೆ ಉಲ್ಲೇಖಿಸಿಕೊಳ್ಳುವಾಗ, ನಾವು ಏನಾಗಿರಲು ಮತ್ತು ಏನಾಗಲು ಆಯ್ಕೆ ಮಾಡಿಕೊಂಡಿದ್ದೇವೆ ಎಂಬುದನ್ನು ನೋಡಲು ಎಲ್ಲರಿಗೂ ನಾವು ಸ್ಪಷ್ಟವಾದದ್ದನ್ನಾಗಿ ಮಾಡುತ್ತೇವೆ.

ಕ್ರಿಸ್ತನು ಯಾರಾಗಿದ್ದನೆಂಬುದನ್ನು ತಿಳಿದುಕೊಂಡು, ಆತನು ಕಟ್ಟಿದ್ದರ ಮತ್ತು ಆತನ ಒಡತನದಲ್ಲಿರುವ - ಆತನ ಸಭೆಯ ಭಾಗವಾಗಿರಲು ನೀವು ಬಯಸುವಿರಿ, "ಕ್ರಿಸ್ತನ ಸಭೆ" ಎಂದು ಹೇಳುವ ಸಂಕೇತವು ನಿನ್ನ ಹೃದಯದ ಮೇಲೆ ಇರುವುದೋ?

---

ಟಿಪ್ಪಣಿ

[1]ಯಾವ "ಸಭೆಗಳಿಗೆ" ಇತರ ಸ್ಥಳಗಳು ಕೂಡಿಸಲ್ಪಟ್ಟಿರುವವೋ ಅವುಗಳು ಹೀಗೆ ಕಾಣಿಸಿಕೊಳ್ಳುತ್ತವೆ, "ಗಲಾತ್ಯದ ಸಭೆಗಳು" (1 ಕೊರಿಂಥ 16:1; ಗಲಾತ್ಯ 1:2), "ಯೂದಾಯದ ಸಭೆಗಳು" (ಗಲಾತ್ಯ 1:22), "ಲವೊದಿಕೀಯದ ಸಭೆ" (ಕೊಲೊಸ್ಸೆ 4:16) ಮತ್ತು "ಥೆಸಲೊನೀಕದ ಸಭೆ" (1 ಥೆಸಲೊನೀಕ 1:1).

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. "ಸಿಬ್ಬೋಲೆತ್" ಎಂಬುದು ಎಫ್ರಾಯೀಮ್ಯನನ್ನು ಹೇಗೆ ಗುರುತಿಸಿತು?
2. ಸಭೆಯು ಯಾವಾಗ ಸ್ಥಾಪಿಸಲ್ಪಟ್ಟಿತು?
3. ಸ್ನಾನಿಕನಾದ ಯೋಹಾನನು ಸಭೆಯನ್ನು ಹೇಗೆ ಉಲ್ಲೇಖಿಸುತ್ತಾನೆ?
4. ಕ್ರಿಸ್ತನು ಸಭೆಯೊಂದಿಗೆ ಇಟ್ಟುಕೊಂಡಿರುವ ಭಿನ್ನವಾದ ಸಂಬಂಧಗಳ ಯಾದಿ ಮಾಡಿರಿ. ಪ್ರತಿಯೊಂದು ಸಂಬಂಧಕ್ಕೆ ಪರಿಶುದ್ಧ ಬರಹಗಳಿಂದ ಪುರಾವೆಯನ್ನು ಕೊಡಿರಿ.
5. ಸಭೆಯು ಕ್ರಿಸ್ತನಿಗೆ ಒಳಪಟ್ಟಿರುತ್ತದೆ ಎಂಬುದನ್ನು ಸಿದ್ಧಪಡಿಸಿ ತೋರಿಸಿರಿ.
6. ಹೊಸ ಒಡಂಬಡಿಕೆಯಲ್ಲಿ ಸಭೆಯು ಹೇಗೆ ಉಲ್ಲೇಖಿಸಲ್ಪಟ್ಟಿದೆ.
7. ಹೊಸ ಒಡಂಬಡಿಕೆಯಲ್ಲಿ ಸಭೆಗೆ ಎಂದಾದರೂ ಹೆಸರು ಕೊಲ್ಪಟ್ಟಿದೆಯೋ?
8. ಇಂದು ಹೊಸ ಒಡಂಬಡಿಕೆಯ ಸಭೆಯನ್ನು ಕುರಿತು ಅಗತ್ಯವಾಗಿರುವ ಒಪ್ಪಿಸಿ ಕೊಡವಿಕೆಯನ್ನು ಸಂಕ್ಷೇಪದಲ್ಲಿ ಹೇಳಿರಿ.
9. ಇಂದು ಸಭೆಯು ಸ್ವೀಕರಿಸಬಹುದಾದ ಅತಿದೊಡ್ಡ ಶ್ಲಾಘನೆ ಯಾವುದು?
10. ಯೇಸುವಿನ ವಿಚಾರಣೆಯ ರಾತ್ರಿಯಲ್ಲಿ ಪೇತ್ರನು ಹೇಗೆ ಗುರುತಿಸಲ್ಪಟ್ಟನು?

© 2009 Truth for Today